ಕಥೆ

# ಪದ್ದಮ್ಮನ ಮೂಗುತಿ



**ಸಮುದ್ಯತಾ ಕಂಜರ್ಪಣೆ**

ಕಲೆ: ವಿ.ಎಂ. ಮಂಜುನಾಥ್

'ಮನೆಗೇ ಬಂದ್ಬಿಡಿ, ಹಾಸ್ಪಿಟಲ್‌ನಿಂದ ನಾವೂ ಈಗಲೇ ಹೊರಡ್ತಿದೀವಿ, ಇಲ್ಲಿ ಬಂದರೂ ನೋಡೋಕಾಗಲ್ಲ, ಆಂಬುಲೆನ್ಸ್‌ಗೆ ಶಿಫ್ಟ್ ಮಾಡ್ತಿದಾರೆ ಆಗಲೇ'

'ಏ ಪುಟ್ಟಾ, ನೀನೂ ಇವನೂ ಇಲ್ಲೇ ಕೂತಿರಿ, ಎಲ್ಲೂ ಓಡಾಡಬೇಡಿ' ಫೋನುಗಳಿಗೆ ಉತ್ತರಿಸುತ್ತಲೇ ಆಸ್ಪತ್ರೆ ಓಡಾಟದಲ್ಲಿ ಮಕ್ಕಳು ಎಲ್ಲಿ ಕಾಣೆಯಾಗ್ತಾರೋ ಏನೋ ಎಂದು ಆತಂಕ ಪಡುತ್ತಾ ಮಕ್ಕಳಿಗೆ ಗದರುತ್ತಿದ್ದಳು ಜಾನು.

'ನೀನೊಂಚೂರು ನೀರು ಕುಡಿ ಸೂರ್ಯ, ಇನ್ನೂ ಕೆಲಸಗಳಿವೆ ತುಂಬಾ, ಬರೋರು ಹೋಗೋರು ಜಾಸ್ತಿ ಆಗ್ತಾರೆ.'

ಸೂರ್ಯ ಬಿಲ್ಲಿಂಗ್ ಕೌಂಟರ್ ಬಳಿ ಗೋಡೆಗೊರಗಿ ನಿಂತಿದ್ದ. ಕಣ್ಣುಗಳು ಊದಿಕೊಂಡಿದ್ದವು.

'ಹ್ಞೂ.. ಅದು... ಜಾನು, ಒಂದು ಐವತ್ತು ಸಾವಿರ ಇದ್ರೆ ಕಳಿಸ್ತೀಯಾ, ಬಿಲ್ ಕಟ್ಬೇಕು'

'ಅಷ್ಟಿದೆಯಾ ಇಲ್ಲವಾ ಚೆಕ್ ಮಾಡ್ತೀನಿರು' ಎಂದು ಮತ್ತೆ ಫೋನ್ ಕೈಗೆತ್ತಿಕೊಂಡವಳಿಗೆ ಮೇಲಿಂದ ಮೇಲೆ ಬರುತ್ತಿದ್ದ ಕಾಲ್‌ಗಳನ್ನು ನೋಡಿ ಸ್ವಲ್ಪ ಕಿರಿಕಿರಿಯಾಯಿತು.

'ಹಲೋ ಚಿಕ್ಕಮ್ಮ' 'ಹ್ಞೂ ಹೌದು.. ಆಸ್ಪತ್ರೆಲೇ' 'ಇವತ್ತು ಮಧ್ಯಾಹ್ನ'

'ಹ್ಞೂ ಮನೆಗೇ ಬರ್ತೀವಿ..' ಫೋನಿಟ್ಟು ಸುತ್ತ ಯಾರನ್ನೋ ಹುಡುಕಲಾರಂಭಿಸಿದಳು.

ಕುಸುಮಾ ಐಸಿಯುನ ಮುಂದಿನ ಕುರ್ಚಿಯಲ್ಲೇ ಕೂತಿದ್ದಳು. ಅತ್ತು ಅತ್ತು ಕಣ್ಣು ಕೆಂಪಗಾಗಿತ್ತು. ಜಾನು ಅವಳ ಭುಜ ಸವರಿ 'ಇದರಲ್ಲಿ ಅಮ್ಮನ ಬಟ್ಟೆಗಳಿವೆ, ಇಟ್ಕೊಂಡಿರು, ನಾನು ಬಿಲ್ ಕಟ್ಟಿ ಬರ್ತೀನಿ, ಆಂಬುಲೆನ್ಸ್‌ಗೆ ಶಿಫ್ಟ್ ಆದ ಕೂಡಲೇ ಮನೆಗೆ ಹೋಗೋದು' ಎಂದು ಅವಳ ಕೈಗೆ ಒಂದು ಬ್ಯಾಗ್ ಕೊಟ್ಟಳು.

ಬಿಲ್ಲಿಂಗ್ ಕೌಂಟರ್ ಬಳಿ ಬಂದು ಸೂರ್ಯನಿಗೆ, 'ನಿನ್ನ ಅಕೌಂಟಿಗೆ ಹಣ ಕಳಿಸಿದೀನಿ, ಬಿಲ್ ಕಟ್ಟಿ ಬಾ, ನಾನು ಆಂಬುಲೆನ್ಸ್ ಚೆಕ್ ಮಾಡ್ತೀನಿ' ಎಂದು ಹೊರಗೆ ಬಂದವಳಿಗೆ ಆಸ್ಪತ್ರೆಯ ಮೆಟ್ಟಿಲ ಮುಂದೆ ಕಣ್ಣೊರೆಸಿಕೊಂಡು ಯಾರೋ ನೆಂಟರ ಹತ್ತಿರ ಮಾತಾಡುತ್ತಿದ್ದ ಮಾವ ಕಾಣಿಸಿದರು.

'ಮಾವ, ಒಂಚೂರು ಮಕ್ಕಳನ್ನು ಕರ್ಕೊಂಡು ಮನೆಗೆ ಹೊರಡಿ ನೀವು. ಆಂಬುಲೆನ್ಸ್ ಬರೋ ಹೊತ್ತಿಗೆ ಅಲ್ಲಿ ಸ್ವಲ್ಪ ಮನೆ ಹಾಲ್‌ನಲ್ಲಿ ಜಾಗ ಮಾಡಿರಿ. ನಿಮ್ಮವರಿಗೆ ಎಲ್ಲರಿಗೂ ಫೋನ್ ಮಾಡಿ, ನಾವು ಬರ್ತೀವಿ ಅಷ್ಟರಲ್ಲಿ'

ಮಾವ, 'ನೋಡಮ್ಮ ಹೇಗಾಗೋಯ್ತು, ಬೆಳಿಗ್ಗೆ ಇನ್ನೂ ಜಾನು ಬಂದ್ಲಾ ಅಂತ ಕೇಳಿದ್ಲು... ಎಂದು ಶುರು